attract any privilege. I quite concede the point of my Hon. friend Sri Bangarappa that all matters of policy announcement must be made here. Either raising water rate or passing an order to go to the tribunal—they are purely administrative matters. Any way, I have clarified the position that the Report is not correct.

Taking of certain Notices

ಶ್ರೀ ಎಂ. ಎಸ್. ಕೃಷ್ಣನ್ (ಮಲ್ಲೇಶ್ವರ).—ಸ್ವಾಮೀ, ನಾನು ಹಾಗೂ ಶ್ರೀ ಕಕ್ಕಿಲಾಯ ರವರು ರೂಲು 312ರ ಪ್ರಕಾರ ಒಂದು ನೋಟೀಸನ್ನು ಕಳುಹಿಸಿದ್ದೆವು. ಅದು ಸಂಜೆಗೆ ಬರುತ್ತದೆ ಎಂದು ಹೇಳಿದ್ದರಿ. ಆ ಸಂಜೆ ಇನ್ನೂ ಬರಲಿಲ್ಲ.

ಅಧ್ಯಕ್ಷರು.—ತಾವು ನಿನ್ನೆ ಸಂಜೆ ಇರಲಿಲ್ಲ.

ಶ್ರೀ ಎಂ. ಎಸ್. ಕೃಷ್ಣನ್.—ತಮ್ಮ ಪ್ರೊಸೀಜರು ಪ್ರಕಾರ ಇದು ಯಾವತ್ತು ಬರುತ್ತದೆ ಎಂದು ಸೂಚಿಸಲು ಅಜೆಂಡಾದಲ್ಲೇ ಸೇರಿಸುತ್ತಿದ್ದರು. ಇದು ನಮಗೆ ಸರಿಯಾಗಿ ಗೊತ್ತಾಗುತ್ತಿಲ್ಲ. ಇದರ ಬಗ್ಗೆ ಸೂಕ್ತವಾದ ತಿಳುವಳಿಕೆ ಕೊಟ್ಟರೆ ಒಳ್ಳೆಯದು.

Statement by the Minister for Public Works and Electricity

re : **alleged Police Excesses on Students at Mysore.**

ಶ್ರೀ ಕೆ. ಎಂ. ನಾಗಣ್ಣ (ಚಿಕ್ಕಪೇಟೆ).—2-3-1974 ರಂದು ಮೈಸೂರಿನಲ್ಲಿ ನಡೆದ ಪೋಲೀಸಿನವರ ಅತ್ಯಾಚಾರಗಳ ಬಗ್ಗೆ ಸರಕಾರ ಇಂದು ಹೇಳಿಕೆ ಕೊಡುತ್ತೆ ಎಂದು ತಿಳಿಸಿತ್ತು. ಅದನ್ನು ಈಗ ತಿಳಿಸಬೇಕೆಂದು ತಮ್ಮ ಮೂಲಕ ಅದರಲ್ಲಿ ಕೇಳುತ್ತೇನೆ.

STATEMENT BY THE MINISTER FOR PUBLIC WORKS AND ELECTRICITY.

re : alleged Police excesses on students at Mysore

Sri H. M. CHANNABASAPPA (Minister for Public Works and Electricity).—Sir, in pursuance of the assurance held out by Government on 4th March 1974 that the allegations of Police Excesses on the 2nd March 1974 at Mysore, would be looked into by a Senior I.A.S. Officer, I am making this statement.

The Divisional Commissioner, Mysore, was directed to look into the matter and submit a report. After making due enquiries, the Divisional Commissioner, Mysore, has reported that :

There was a public meeting on 2nd March 1974 at Thyagaraja Circle in Mysore, in connection with the Congress Party's election campaign. A few followers of the Kannada Chaluvaligars Movement disturbed the meeting and, as a result, 15 persons were arrested. The meeting then passed off peacefully.

(SRI H. M. CHANNABASAPPA)

He has further reported that on the night of 2nd March 1974, the Police have taken three injured persons to the K. R. Hospital for treatment. The injuries were of a minor nature. There was bleeding in two cases from simple wounds on the leg or arms. They were treated in the out-patient ward itself and then discharged.

He has reported that the cause of injuries may be either due to a fall during the chase for arrest or by beating. Even if it be the latter, it could not be termed as excessive in view of the very simple nature of the injuries.

Further, he has reported that there are no cases of treatment of persons for injuries elsewhere other than the three treated in the out-patient ward of the K. R. Hospital. This would not have been the case if there had been police excesses, in which case, there would have been many complaints either to the civil authorities or to the Magistracy.

The Divisional Commissioner has further affirmed that "In fact the Magistrate, before whom the arrested persons were produced, has recorded that the accused allege no ill-treatment from the police."

He has concluded that his enquiries have disclosed that there was no case of the use of excessive force by the Police arising from the incident of 2nd March 1974.

†ಶ್ರೀ ಕೆ. ಎಂ. ನಾಗಣ್ಣ.---ಸ್ವಾಮಿ, ನರಕಾರದವರು ಇಲ್ಲಿ ಕೊಟ್ಟಿರುವ ಹೇಳಿಕೆ ಬರೀ ಪೋಲೀಸು ರಿಪೋರ್ಟ್ ಆಧಾರದ ಮೇಲೆ ತರಿಸಿಕೊಟ್ಟಿದ್ದಾರೆ, ಇಲ್ಲಿದ್ದ ಹುಡುಗರನ್ನು ನಂಜೆ ಎಂದರೆ ರಾತ್ರಿ ಎಂಟು ಗಂಟೆಗೆ ಹೊಡೆದವರನ್ನು ಇಲ್ಲಿರುವ ಕೆ.ಆರ್. ಆಸ್ಪತ್ರೆಗೆ ರಾತ್ರಿ ಎರಡು ಗಂಟೆಗೆ ಕರೆದುಕೊಂಡು ಹೋಗಲು ಕಾರಣವೇನು ? ಪೋಲೀಸು ಸ್ಟೇಷನ್‌ನಲ್ಲಿ ರಾತ್ರಿ ಎರಡು ಗಂಟೆಯಿಂದ ಎಂಟು ಗಂಟೆ ವರೆಗೆ ಇಟ್ಟುಕೊಂಡು ಅವರನ್ನು ಹೊಡೆದು ಆಮೇಲೆ ರಾತ್ರಿ ಎರಡು ಗಂಟೆಯ ಮೇಲೆ ಅಲ್ಲಿಗೇಕೆ ಕರೆದುಕೊಂಡು ಟ್ರೀಟುಮೆಂಟು ಕೊಡಬೇಕಾಗಿತ್ತು ? ಇದರ ಬಗ್ಗೆ ಕೂಲಂಕಷವಾಗಿ ವಿಚಾರಣೆ ಮಾಡಿದ್ದರೆ ಚೆನ್ನಾಗಿರುತ್ತಿತ್ತು ಯಾರೂ ಇದರ ಬಗ್ಗೆ ದೂರನ್ನು ಕೊಟ್ಟಿಲ್ಲ ಎನ್ನುತ್ತಾರೆ. ಪೋಲೀಸರನ್ನು ಷೀಲ್ಡು ಮಾಡುವುದಕ್ಕಾಗಿ ಇಂತಹ ಒಂದು ವರದಿ ತರಿಸಿರುವಂತೆ ಇದರಲ್ಲಿ ನಮಗೆ ಕಾಣುತ್ತದೆ. ನೀವು ಪ್ರಜಾಪ್ರಭುತ್ವದಲ್ಲಿ ನಂಬಿಕೆ ಇಟ್ಟಿರುವ ಜನ ಎಂದು ನಿಮ್ಮನ್ನು ಆರಿಸಿ ಅಡಳಿತ ಕೊಟ್ಟಿದ್ದಾರೆ. ಇಂತಹ ವಿಚಾರಗಳ ಬಗ್ಗೆ ಹಿಂದೆ ಮುಖ್ಯ ಮಂತ್ರಿಗಳು ಯಾರೇ ಆಗಿರಲ್ಲಿ ಇಂತಹವರು ತಪ್ಪಿಸ್ಥರು ಎಂದು ಕಂಡು ಬಂದರೆ ಅವರ ಮೇಲೆ ಉಗ್ರವಾದ ಕ್ರಮ ತೆಗೆದು ಕೊಳ್ಳತ್ತೇವೆಂದು ಇಲ್ಲೇ ಹೇಳಿದ್ದರು. ಇದು ಬರೀ ಪೋಲೀಸರ ದಬ್ಬಾಳಿಕೆ ತೋರಿಸುತ್ತದೆ. ಪೋಲಿಸಿನವರ ವರದಿ ಹಿಂದೆ ಹೇಗಿರುತಿತ್ತು ಎಂದರೆ 1967 ನೇ ಇಸವಿಯಲ್ಲಿ ಕಲ್ಲು ಹೊಡೆದರು ಎಂದು ನನ್ನ ಮೇಲೆ ಕೇಸು ಹಾಕಿ ಅದು ಮೂರು ವರ್ಷಗಳ ಕಾಲ ನಡೆಯುತು. ಪೋಲೀಸಿನವರು ಕೊಡುವ ವರದಿಗಳಲ್ಲಿ ನೂರಕ್ಕೆ ತೊಂಬತ್ತು ಭಾಗ ಬರೀ ಸುಳ್ಳು ರಿಪೋರ್ಟುಗಳೇ ಬರುತ್ತವೆ. ಪ್ರಜಾಪ್ರಭುತ್ವ ಪದ್ಧತಿಯ ಆಡಳಿತವನ್ನು ನಡೆಸುತ್ತಿರುವ ಮಂತ್ರಿಗಳು ಇಂತಹ ಪೋಲೀಸರ ಹೇಳಿಕೆಗಳನ್ನು ಪೂರ್ಣವಾಗಿ ನಂಬದೆ ಜನರ ಹಿತರಕ್ಷಣೆ ಮಾಡುವಂತಹ ಕಾರ್ಯಕ್ರಮಗಳನ್ನು ಮಾಡಲು ಪ್ರಯತ್ನ ಮಾಡಬೇಕು ಮತ್ತು ಇದರ ಬಗ್ಗೆ ಸರಿಯಾಗಿ ವಿಚಾರ ಮಾಡಬೇಕೆಂದೂ ಹೇಳುತ್ತೇನೆ.

ಶ್ರೀ ಕೆ. ಎಚ್. ಹನುಮೇಗೌಡ.—ಮಾನ್ಯ ಮಂತ್ರಿಗಳು ಅಲ್ಲಿ 300 ಜನರು ಇದ್ದರು ಎಂದು ಹೇಳಿದರು. ಆದರೆ ಅಲ್ಲಿ ಇದ್ದ ಹುಡುಗರ ಸಂಖ್ಯೆ 8-10 ಮಾತ್ರ. ಮತ್ತು ಅಂದು ಅಲ್ಲಿ ರಾಟಿ ಚಾರ್ಜ್ ಆಗಲಲ್ಲವಾದ್ದರಿಂದ ಯಾರಿಗೂ ಗಾಯಗಳಾಗಲಲ್ಲ ; ಆದರೂ ಮಧ್ಯ ರಾತ್ರಿಯಲ್ಲ ಅವರನ್ನು ಆಸ್ಪತ್ರೆಗೆ ಕರೆದುಕೊಂಡು ಹೋಗಲು ಕಾರಣವೇನು ? ಪೋಲೀಸ್ ಸ್ಟೇಷನ್‌ಗೆ ಕರೆದು

ಕೊಂಡು ಹೋದಮೇಲೆ ಪೊಣಕಾಲಿಗೆ ಹೊಡೆದಿದ್ದಾರೆ. ಪೋಲೀಸಿನವರು ಅವರನ್ನು ಅಟ್ಟಿಸಿ ಕೊಂಡು ಹೋಗುವಾಗ ಬಿದ್ದು ಗಾಯವಾಗಿರಬಹುದು ಎಂದು ಮಾನ್ಯಮಂತ್ರಿಗಳು ಹೇಳಿದರು ; ಓಡುವಾಗ ಬಿದ್ದರೆ ಪೊಣಕಾಲಿಗೆ ಏಟು ಬೀಳುವುದಿಲ್ಲ ; ಕಾಲು, ಕೈ, ಮುತ್ತು ಹಣೆಗೆ ಏಟು ಬೀಳುತ್ತವೆ ; ಆದರೆ ಪೊಣಕಾಲಿಗೆ ಏಟು ಬಿದ್ದಿರುವುದನ್ನು ನಾವು ನೋಡಿ ಸ್ಪೀಪೆ ; ಪ್ರೆಸ್‌ನವರು ನೋಡಿದ್ದಾರೆ.

ಅಧ್ಯಕ್ಷರು.—ತಾವು ಭಾಷಣ ಮಾಡಬೇಡಿ ; ಸ್ಪಷ್ಟೀಕರಿಸಿಬೇಕಾದ್ದು ಏನಾದರು ಇದ್ದರೆ ಕೇಳಿ ?

ಶ್ರೀ ಕೆ. ಎಚ್. ಹನುಮೇ ಗೌಡ —ಪೋಲೀಸಿನವರು ಏನೂ ಮಾಡಿಲ್ಲ ಎಂದು ಹೇಳಿದ್ದಾರೆ. ಅವರೆ ಅವು ಸರಿಯಲ್ಲ ; ಪೋಲೀಸ್ ಸ್ಟೇಷನ್‌ಗೆ ಕರೆದುಕೊಂಡು ಹೋಗಿ ರಾತ್ರಿ 11 ಗಂಟೆಯಲ್ಲಿ ಹೊಡೆದಿದ್ದಾರೆ. ಪೋಲೀಸಿನವರ ದೌರ್ಜನ್ಯ ಇದೇ ರೀತಿ ಮುಂದುವರೆದರೆ ಈ ದೇಶಕ್ಕೆ ಉಳಿಗಾಲವಿಲ್ಲ ; ಅಂದು ಎಲ್ಲರನ್ನೂ ಒಂದೇ ರೂಮಿನಲ್ಲಿ ಕೂಡಿ ಹಾಕಿದ್ದರು ; ಊಟ ಸಹ ಕೊಡದೆ ತೊಂದರೆ ಕೊಟ್ಟಿದ್ದಾರೆ. ಕಕ್ಕಸ್ ರೂಮಿನಪಕ್ಕದ ರೂಮಿನಲ್ಲಿಯೇ ಇವರನ್ನು ಕೂಡಿ ಹಾಕಿದ್ದರಿಂದ, ಅವರ ವಾಸನೆಯಿಂದ ಎಷ್ಟೊ ಜನರು ವಾಂತಿ ಮಾಡಿಕೊಂಡಿದ್ದಾರೆ.

ಶ್ರೀ ಎಚ್. ಎಂ. ಚೆನ್ನಬಸಪ್ಪ. —ನೀವೂ ಅಲ್ಲಿ ಇದ್ದಿರಿ ಎಂದು ಕಾಣುತ್ತದೆ.

ಶ್ರೀ ಕೆ. ಎಚ್. ಹನುಮೇಗೌಡ. —ಅಲ್ಲಿ ಇದ್ದವರು ಬಂದು ನನಗೆ ಹೇಳಿದರು ; ತಾವು ಸಹ ಅಲ್ಲಿಗೆ ಹೋಗಿ ನೋಡಿಲ್ಲ. ಪೋಲೀಸಿನವರು ಕೊಟ್ಟ ಸ್ಟೇಟ್‌ಮೆಂಟನ್ನು ಕೊಟ್ಟಿದ್ದಿರಿ ಅಷ್ಟೆ.

Sri H. M. CHANNABASAPPA.—I would be very happy to give clarification, but it would not be appropriate to make a speech telling this House or the Public about all those feelings the Hon. Member has. That is all what I wanted to inform

ಶ್ರೀ ಜೆ. ಎಲ್. ಕಬಾಡಿ.—ಮಾನ್ಯ ಮಂತ್ರಿಗಳು ಸರ್ಕಾರದ ಪರವಾಗಿ ಈ ಸದನದಲ್ಲಿ ಮಾಡಿರುವ ಸ್ಟೇಟ್‌ಮೆಂಟನ್ನು ಅಲ್ಲಗಳೆಯುವುದಕ್ಕಾಗುವುದಿಲ್ಲ ; ಆದರೆ ಈ ಬಗ್ಗೆ ನಾವು ಒಂದೇ ಒಂದು ಮನವಿ ಮಾಡಿಕೊಳ್ಳುವುದೇನೆಂದರೆ, ಅಂದು ಶ್ರೀಮಾನ್ ಬದರೀನಾರಾಯಣ್ ಅವರು ಅಲ್ಲಿ ಹಾಜರಿದ್ದರು ; ಆದಕಾರಣ ಅಂದು ಅಲ್ಲಿ ಏನು ನಡೆಯಿತು ಎಂಬ ಬಗ್ಗೆ ಅವರ ಒಂದು ಸ್ಟೇಟ್‌ಮೆಂಟನ್ನು ನಾವು ಕೇಳಬೇಕಾಗಿದೆ. ಈಗ ಅವರು ಇಲ್ಲಿ ಇದ್ದಾರೆ. ಹಿಂದೆ ಅವರು ಮಂತ್ರಿಗಳಾಗಿದ್ದವರು ; ಈಗ ಸದಸ್ಯರಾಗಿರುವುದರಿಂದ ಅವರ ಸ್ಟೇಟ್‌ಮೆಂಟ್ ಮುಖ್ಯ. ಅವರು ಸ್ಟೇಟ್‌ಮೆಂಟ್‌ಕೊಡದಿದ್ದರೆ ಈಗ ಸರ್ಕಾರದವರು ಕೊಟ್ಟಿರುವ ಸ್ಟೇಟ್‌ಮೆಂಟ್ ತಪ್ಪಾಗಿ ವರದಿಯಾಗಿದೆ ಎಂದು ನಮಗೆ ಭಾಸವಾಗುತ್ತದೆ.

ಅಧ್ಯಕ್ಷರು.—ಅಂದು ಅಲ್ಲಿ ಮಾನ್ಯ ಬದರೀನಾರಾಯಣ್ ಅವರು ಇದ್ದಿರಬಹುದು ; ಇನ್ನೂ ಹತ್ತಾರು ಜನರು ಇದ್ದಿರಬಹುದು ; ರೂಲ್ ಪ್ರಕಾರ ಮಾನ್ಯ ಬದರೀನಾರಾಯಣ್ ಅವರು ಈ ಸಭೆಯ ಸದಸ್ಯರಾಗಿದ್ದರೂ ಸಹ ಅವರಿಂದ ಇಲ್ಲಿ ಹೇಳಿಕೆ ಕೊಡಿಸುವುದಕ್ಕೆ ಬರುವುದಿಲ್ಲ. ಆಥವಾ ಅಲ್ಲಿ ಹಾಜರಿದ್ದ ಬೇರೆಯವರನ್ನು ಕರೆಸಿ ಇಲ್ಲಿ ಹೇಳಿಕೆ ಕೊಡಿಸುವುದಕ್ಕೆ ಬರುವುದಿಲ್ಲ. ಈಗ ಬಡ್ಜೆಟ್ ಮೇಲೆ ಮಾತನಾಡತಕ್ಕಂಥ ಸದಸ್ಯರು ಬಹಳ ಜನ ಇರುವುದರಿಂದ, ಇದರ ಬಗ್ಗೆ ಸಮಯ ಕಳೆಯುವುದರಲ್ಲಿ ಏನೂ ಅರ್ಥವಿಲ್ಲ ;

ಶ್ರೀ ಟಿ. ವಿ. ಕೃಷ್ಣಪ್ಪ.—ಮಾನ್ಯ ನಾಗಣ್ಣನವರು ಒಂದು ಯುಕ್ತವಾದ ಪ್ರಶ್ನೆಯನ್ನು ಕೇಳಿದ್ದಾರೆ. ಮಧ್ಯರಾತ್ರಿಯಲ್ಲಿ ಅವರನ್ನು ಆಸ್ಪತ್ರೆಗೆ ಸೇರಿಸಲು ಕಾರಣವೇನು, ಅವರಿಗೆ ಯಾವಾಗ ಗಾಯವಾಯಿತು ಎಂಬ ಪ್ರಶ್ನೆಗೆ ನಮಗೆ ನಮೂದಾಯಿಸಿ ಕೊಡಬೇಕು.

Sri H M. CHANNABASAPPA.—We have ordered for an inquiry from the Divisional Commissioner. The Divisional Commissioner has sent his report.

ಶ್ರೀ ಕೋಣಂದೂರು ಲಿಂಗಪ್ಪ.—ಅವರು ಸತ್ಯಕ್ಕೆ ದೂರವಾದ ರಿಪೋರ್ಟ್ ಕೊಟ್ಟಿದ್ದಾರೆ.

(Interruptions)

ಅಧ್ಯಕ್ಷರು.—ಯಾವುದನ್ನೂ ರೆಕಾರ್ಡ್ ಮಾಡಬೇಡಿ.

Sri H. M. CHANNABASAPPA.—The timings have not been mentioned in the report of the Divisional Commissioner.

ಶ್ರೀ ಕೋಣಂದೂರು ಲಿಂಗಪ್ಪ.—ಈ ಸರ್ಕಾರದವರು ಇಷ್ಟೊಂದು ಬಹಿರಂಗವಾಗಿ ಸತ್ಯಕ್ಕೆ ದೂರವಾದ ಹೇಳಿಕೆಯನ್ನು ಸಾರ್ವಜನಿಕರ ಮೇಲೆ ಮತ್ತು ಕನ್ನಡ ಜಿಲ್ಲಾವಳಿಗಾರರ ಮೇಲೆ ಹೇಳುತ್ತಿದ್ದಾರೆ. ಆದಕಾರಣ ಈ ಸರ್ಕಾರದ ನೀತಿಯನ್ನು ಮತ್ತು ದಬ್ಬಾಳಿಕೆಯನ್ನು ವಿರೋಧಿಸಿ ನಾನು ಸಭಾತ್ಯಾಗ ಮಾಡುತ್ತೇನೆ.

(ಮಾನ್ಯ ಸದಸ್ಯರು ಸಭಾತ್ಯಾಗ ಮಾಡಿದರು)

Sri H. M. CHANNABASAPPA.—Another point I would like to submit. Nothing prevented the accused, to complain if there is any such thing. When the Police people brought them before the Magistrate. The Divisional Commissioner has clearly stated what has been exactly written by the Magistrate. The accused has not made any complaint about any police people. For the information of the House, I would read the relevant portion from the report of the Divisional Commissioner.

> "In fact the Magistrate before whom the arrested persons were produced, has recorded that the accused allege no ill-treatment from the Police."

This is what the Magistrate has written.

ಶ್ರೀ ಕೆ.ಎಚ್. ಹನುಮೇಗೌಡ.—ಈ ರಾಜ್ಯದ ವಿದ್ಯಾರ್ಥಿಗಳ ಮೇಲೆ ಪದೇ ಪದೇ ಪೋಲೀಸಿನವರ ದೌರ್ಜನ್ಯ ನಡೆಯುತ್ತಿದೆ; ಆದರೆ ಸರ್ಕಾರದವರು ಅದನ್ನು ಅಲ್ಲಗಳೆಯುತ್ತಿದ್ದಾರೆ ಈ ಸರ್ಕಾರದ ನೀತಿಯನ್ನು ವಿರೋಧಿಸಿ ನಾವೆಲ್ಲರೂ ಸಭಾತ್ಯಾಗ ಮಾಡುತ್ತೇವೆ.

(ಮಾನ್ಯ ವಿರೋಧಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

ಅಧ್ಯಕ್ಷರು.—ಬಡ್ಜೆಟ್ ಮೇಲೆ ಮಾತನಾಡುವವರ ಪಟ್ಟಿಯನ್ನು ನನಗೆ ಕಳಿಸಿಕೊಟ್ಟಿದ್ದಾರೆ. ಅದರಲ್ಲಿ 12 ಜನರ ಹೆಸರುಗಳು ಇವೆ; ಆದಕಾರಣ ಮಾನ್ಯ ಶ್ರೀರನಾಳ ಚಂದ್ರಶೇಖರ್ ಅವರು ತಮ್ಮ ಭಾಷಣವನ್ನು 5 ನಿಮಿಷದಲ್ಲಿ ಮುಗಿಸಬೇಕು; ಅವರು ಆಗಲೇ ನೆನ್ನೆದಿವಸ 19 ನಿಮಿಷ ಮಾತನಾಡಿದ್ದಾರೆ.

BUDGET ESTIMATES FOR 1974-75
General Discussion

(Debate Continued)

† ಶ್ರೀ ಎಸ್. ಎಂ. ಶ್ರೀರನಾಳ ಚಂದ್ರಶೇಖರ್ (ಹೊಸನಗರ).—ಸನ್ಮಾನ್ಯ ಅಧ್ಯಕ್ಷರೇ, ನೆನ್ನೆದಿವಸ ನಾನು ಮಾತನಾಡುವಾಗ ಮಾನ್ಯ ವಿರೋಧಪಕ್ಷದ ನಾಯಕರು ಬರಗಾಲದ ಪ್ರದೇಶಗಳಲ್ಲಿ ನಡೆದಿರುವ ಕಾಮಗಾರಿಗಳ ಬಗ್ಗೆ ತನಿಖೆ ಮಾಡಲು ಒಂದು ವಿಚಾರಣಾ ಸಮಿತಿಯನ್ನು ನೇಮಕ ಮಾಡಬೇಕೆಂದು ಎತ್ತಿರತಕ್ಕಂಥ ಅಂಶದ ಬಗ್ಗೆ ನಾನು ಗಾಂಪರೊಡೆಯರ ಕಥೆಯನ್ನು ಉದಾಹರಣೆ ಕೊಟ್ಟು ಹೇಳಿದೆ. ಆ ರೀತಿ ಏನಾದರೂ ವಿಚಾರಣಾ ಸಮಿತಿಯನ್ನು ಮಾಡಿದರೆ, ವಿಚಾರಣೆ ಎಲ್ಲೆಲ್ಲಿಯೂ ನಡೆದು ಕೊನೆಗೆ ಅದು ನಮ್ಮ ತಲೆಗೆ ಬರಬಹುದು ಎಂಬ ಕಾರಣದಿಂದ ನಾನು ಗಾಂಪರೊಡೆಯರ ಕಥೆಯನ್ನು ಹೇಳಿ ವಿರೋಧಪಕ್ಷದ ನಾಯಕರನ್ನು ಎಚ್ಚರಿಸಿದೆ. ಕನ್ನಡದಲ್ಲಿ